ಹವಾಮಾನ ಮುನ್ಸೂಚನೆ: ನಗರದಲ್ಲಿ ಶುಷ್ಕ ಆಗಸ ಇರಲಿದೆ

ಸುದ್ದಿವೈವಿಧ್ಯಕ್ಕೆ prajavani.net ಗೆ ಭೇಟಿ ಮಾಡಿ

# ನಗರದ ತ್ಯಾಜ್ಯ ವಿಲೇವಾರಿಗೆ ತಡೆ

## ಮೂಲಸೌಕರ್ಯದ ಭರವಸೆ ಈಡೇರಿಲ್ಲ ಬೆಳ್ಳಹಳ್ಳಿ ಗ್ರಾಮಸ್ಥರ ಅಸಮಾಧಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಿಟ್ಟಗಾನಹಳ್ಳಿ-ಕಣ್ಣೂರು- ಬೆಳ್ಳಹಳ್ಳಿ ಭೂ ಭರ್ತಿ ಪ್ರದೇಶದಲ್ಲಿ ತ್ಯಾಜ್ಯ ವಿಲೇವಾರಿಗೆ ಗ್ರಾಮಸ್ಥರು ತಡೆಹಾಕಿದ್ದಾರೆ.

ಗ್ರಾಮದ ಸಮಸ್ಯೆಗಳನ್ನು ಪರಿಹರಿಸಲು ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ (ಬಿಎಸ್‌ಡಬ್ಲ್ಯುಎಲ್) ನೀಡಿರುವ ಭರವಸೆ ಈಡೇರಿಸಲು, ಹೀಗಾಗಿ, ಇಲ್ಲಿ ತ್ಯಾಜ್ಯ ವಿಲೇವಾರಿ ಮಾಡಬಾರದು ಎಂದು ಲಾರಿಗಳು ಭೂಭರ್ತಿ ಪ್ರದೇಶಕ್ಕೆ ಹೋಗದಂತೆ ಟ್ರಾಫಿಕ್‌ಗಳನ್ನು ಅಡ್ಡ ನಿಲ್ಲಿಸಿದ್ದಾರೆ.

ನಗರದಿಂದ ತ್ಯಾಜ್ಯ ತುಂಬಿಕೊಂಡು ವಿಲೇವಾರಿಗೆ ಹೋಗಿರುವ ವಿಲೇವಾರಿ ಮಂಗಳವಾರ ಬೆಳಿಗ್ಗೆಯಿಂದ ಸಾಲುಗಟ್ಟಿ ನಿಂತಿತ್ತು. ಹೀಗಾಗಿ, ನಗರದಲ್ಲಿ ಬುಧವಾರ ಸಂಗ್ರಹವಾಗುವ ತ್ಯಾಜ್ಯ ವಿಲೇವಾರಿಗೆ ಲಾರಿಗಳು ಲಭ್ಯವಿರುವುದಿಲ್ಲ. ಆದರಿಂದ ನಗರದ ರಸ್ತೆಗಳಲ್ಲೇ ಕಸ ತುಂಬಿದ ಬೆಳ್ಳಹಳ್ಳಿ ಮುಖ್ಯರಸ್ತೆಯಲ್ಲಿ ಸಾಲುಗಟ್ಟಿ ನಿಂತಿರುವ ತ್ಯಾಜ್ಯ ತುಂಬಿದ ಲಾರಿಗಳು ಆಟೋಗಳು ನಿಲ್ಲುವಸಾಧ್ಯತೆಯಿದೆ.

'ತ್ಯಾಜ್ಯ ವಿಲೇವಾರಿಯಿಂದ ಸ್ಥಳೀಯ ನಿವಾಸಿಗಳಿಗೆ ಸಾಕಷ್ಟು ಸಮಸ್ಯೆಗಳಾಗುತ್ತವೆ. ಇವುಗಳಲ್ಲವನ್ನೂ ನಿವಾರಿಸಿ, ಅಧಿವೈದ್ಯ ಕಾರ್ಯ ಕೈಗೊಳ್ಳತ್ತೀವೆ ಎಂದು ಕಳೆದ ವರ್ಷ ಮಾರ್ಚ್‌ನಲ್ಲಿ ಭರವಸೆ ನೀಡಿದ್ದರು. 2025ರ ಮಾರ್ಚ್ 11ರಿಂದ ತ್ಯಾಜ್ಯ ವಿಲೇವಾರಿಗೆ ಅವಕಾಶ ನೀಡಿರಲಿಲ್ಲ. ಅಂದಿನ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಸ್ಥಳಕ್ಕೆ ಬಂದು ಎರಡು ರೀತಿಯ ಮೂಲಸೌಕರ್ಯ ಕಲ್ಪಿಸುವ ಭರವಸೆ ನೀಡಿದ್ದರು. ಹೀಗಾಗಿ, ಮಾರ್ಚ್ 15ರಿಂದ ತ್ಯಾಜ್ಯ ವಿಲೇವಾರಿ ಆರಂಭವಾಗಿತ್ತು. ಆದರೆ, ನಂತರವೂ ಅವರು ನೀಡಿದ್ದ ಭರವಸೆಗಳನ್ನು ಈಡೇರಿಸಿಲ್ ಎಂದು ಗ್ರಾಮಸ್ಥರು ಆರೋಪಿಸಿದರು.

'ಮಿಟ್ಟಗಾನಹಳ್ಳಿ ಭೂಭರ್ತಿ ಪ್ರದೇಶದಲ್ಲಿರುವ ದ್ರವತ್ಯಾಜ್ಯವನ್ನು ಸುತ್ತುತ್ತಲಿನ ಹಳ್ಳಿಗಳಿಗೆ ಕಳಿಗಳಲ್ಲಿರುವ ದ್ರವತ್ಯಾಜ್ಯದ ಜೊತೆಗೆ ಹೂಳು ತೆಗೆದು ಅಭಿವೃದ್ಧಿ ಮಾಡಿಕೊಡಬೇಕು, ಭೂಭರ್ತಿ ಪ್ರದೇಶದ ಸುತ್ತಮತ್ತಲಿನ ಹಳ್ಳಿಗಳಿಗೆ ಮೂಲಸೌಕರ್ಯ ಕಲ್ಪಿಸಬೇಕು ಎಂದು ಒತ್ತಾಯಿಸಲಾಗಿತ್ತು. ಆದರೆ ಈ ಬಗ್ಗೆ ಯಾವ ರೀತಿಯ ಕಾಮಗಾರಿಗಳನ್ನೂ ಆರಂಭಿಸಿಲ್ ಎಂದು ದೂರಿದರು.

'ಭೂಭರ್ತಿ ಪ್ರದೇಶದಲ್ಲಿ ತ್ಯಾಜ್ಯ ವಿಲೇವಾರಿ ಸ್ಥಗಿತ್ತಿ ಸಂಬಂಧಿಸಿದಂತೆ, ಮಹದೇವಪುರ ವಿಧಾನಸಭೆ ಕ್ಷೇತ್ರದ ಶಾಸಕಿ ಮಂಜುಳಾ ಅರವಿಂದ ಲಿಂಬಾವಳಿ, ಮಾಜಿ ಶಾಸಕ ಅರವಿಂದ ಲಿಂಬಾವಳಿ ಅವರೊಂದಿಗೆ ಬಿಬಿಎಂಪಿಯ ಎಂಎಲ್‌ಸಿ ಅಧಿಕಾರಿಗಳು ಮಂಗಳವಾರ ಸಂಜೆ ಮಾತುಕತೆ ನಡೆಸಿದರು. ಅಧಿವೈದ್ಯ ಕಾಮಗಾರಿಗಳಿಗೆ ಹಣ ಬಿಡುಗಡೆ ಮಾಡುವ ಭರವಸೆ ನೀಡಿದರು' ಎಂದು ಮೂಲಗಳು ತಿಳಿಸಿವೆ.

ಭೂ ಭರ್ತಿ ಪ್ರದೇಶಕ್ಕೆ ಲಾರಿ ಹೋಗದಂತೆ ಟ್ರ್ಯಾಫಿಕ್‌ಗಳನ್ನು ಅಡ್ಡ ನಿಲ್ಲಿಸಲಾಗಿತ್ತು

**ಮುಖ್ಯಾಂಶಗಳು**

- ಸಾಲುಗಟ್ಟಿ ನಿಂತಿದ್ದ ತ್ಯಾಜ್ಯ ತುಂಬಿದ ಲಾರಿಗಳು
- 'ಶಾಸಕರ ಜೊತೆ ಅಧಿಕಾರಿಗಳ ಮಾತುಕತೆ'

# ಕೆವಿಎಸ್ ಶಿಕ್ಷಕರಿಗೆ ಸೌಲಭ್ಯ ಒದಗಿಸಲು ಕ್ರಮ- ಪ್ರಧಾನ್

ಪ್ರಜಾವಾಣಿ ವಾರ್ತೆ

ಧರ್ಮೇಂದ್ರ ಪ್ರಧಾನ್

ಬೆಂಗಳೂರು: 'ಕೇಂದ್ರೀಯ ವಿದ್ಯಾಲಯ ಶಿಕ್ಷಕರಿಗೆ ಎಲ್‌ಇಡಿಯಿಂದ ಸೌಲಭ್ಯಗಳನ್ನು ಒದಗಿಸಲು ಕ್ರಮ ವಹಿಸಲಾಗುವುದು' ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಭರವಸೆ ನೀಡಿದ್ದಾರೆ.

ಅಖಿಲ ಭಾರತ ಕೇಂದ್ರೀಯ ವಿದ್ಯಾಲಯ ಶಿಕ್ಷಕರ ಸಂಘಟನೆಯ (ಎಐಕೆವಿಟಿಎ) ರಾಷ್ಟ್ರೀಯ ಕಾರ್ಯಾದರ್ಶಿ ಕೆ.ಪಿ.ಸಿಂಗ್ ನೇತೃತ್ವದ ಶಿಕ್ಷಕರ ನಿಯೋಗ ಸಚಿವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿತು.

ಈ ವೇಳೆ ಮಾತನಾಡಿದ ಸಚಿವರು, 'ಕೇಂದ್ರೀಯ ವಿದ್ಯಾಲಯ ಸಂಘಟನೆ (ಕೆವಿಎಸ್) ಶಿಕ್ಷಣ ಸಚಿವಾಲಯದ ಪ್ರಮುಖ ಸಂಸ್ಥೆಯಾಗಿದೆ. ಶಿಕ್ಷಕರಿಗೆ ಸಿಗಬೇಕಾದ ಸೌಲಭ್ಯಗಳನ್ನು ಒದಗಿಸಲು ವಿಳಂಬ ಮಾಡುವುದಿಲ್ಲ. ಮುಖ್ಯವಾಗಿ ಮಾಡಿಫೈಡ್ ಅಶ್ಯೂರ್ಡ್ ಕೆರಿಯರ್‌ಗಳ ಪ್ರಯೋಜನ (ಎಂಎಸಿಪಿ) ಜಾರಿ ಕುರಿತು ವಿಸ್ತೃತವರದಿ ನೀಡಿ' ಎಂದು ಕೆವಿಎಸ್ ಆಯುಕ್ತ ವಿಕಾಸ್ ಗುಪ್ತ ಅವರಿಗೆ ಸೂಚನೆ ನೀಡಿದರು.

'ಕೆವಿಎಸ್ ಶಿಕ್ಷಕರು 12 ವರ್ಷ ಸೇವೆ ಸಲ್ಲಿಸಿದ ನಂತರ ಹಿರಿಯ ಶ್ರೇಣಿ ವೇತನ ಸಾಗೂ 24 ವರ್ಷದ ಬಳಿಕ ಆಯ್ಕೆ ಶ್ರೇಣಿ ವೇತನ ಪಡೆಯುತ್ತಾರೆ. 1987ರಿಂದಲೂ ಈ ಪದ್ಧತಿ ಜಾರಿಯಲ್ಲಿದೆ. ಅದರ ಆಧಾರದ ಮೇಲೆ ಪ್ರಗತಿಗೆ ಪ್ರಯತ್ನವಾಗಿದೆ. ಆದ್ದರಿಂದ ಎಂಎಸಿಪಿ ಅಡಿ ವೇತನ ನೀಡುವಂತೆ 2009ರಿಂದಲೂ ಮನವಿ ಸಲ್ಲಿಸಿದ್ದರೂ ಕ್ರಮಕೈಗೊಂಡಿಲ್ ಎಂದು ಕೆ.ಪಿ.ಸಿಂಗ್ ಮಾಹಿತಿ ನೀಡಿದರು.

ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆಯ ಕಾರ್ಯದರ್ಶಿ ಸಂಜಯ್‌ಕುಮಾರ್, ಕೆವಿಎಸ್ ಉಪಾಧ್ಯಕ್ಷ ಪ್ರಾಚಿ ಪಾಂಡೆ ಉಪಸ್ಥಿತರಿದ್ದರು.

# ‘ಬದಲಾವಣೆಗೆ ಶ್ರಮಿಸಿದ ಪಿ.ರಾಮಯ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಚ್.ಡಿ.ದೇವೇಗೌಡ ಅವರು ಪ್ರಧಾನಿಯಾಗಿದ್ದಾಗ ಮಾಧ್ಯಮ ಸಲಹೆಗಾರರಾಂತ ಪ್ರಮುಖ ಹುದ್ದೆ ಅರಿಸಿ ಬಂದರೂ ಅದನ್ನು ಸುತಾರಾಂ ಒಪ್ಪದ ಪಿ.ರಾಮಯ್ಯ ಪತ್ರಕರ್ತರಾಗಿ ಅಜ್ಞೇಯ ಅಲ್ಲದೆ, ಸಮಾಜದ ಪ್ರಗತಿಯಲ್ಲೂ ತೊಡಗಿಸಿಕೊಂಡಿದ್ದರು' ಎಂದು ಅಬಿಯಂಚಿನಗರಿ ಮಠದ ಪೀಠಾಧ್ಯಕ್ಷ ನಿರ್ವಾಣಾಂದನಾಥ ಸ್ವಾಮೀಜಿ ಹೇಳಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಕರ್ನಾಟಕ ಮಾಧ್ಯಮ ಅಕಾಡೆಮಿ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ, ಬೆಂಗಳೂರು ಪ್ರೆಸ್‌ಕ್ಲಬ್, ವರದಿಗಾರರ ಕೂಟ ಬುಧವಾರ ಮಂಗಳವಾರ ಗಾಂಧಿಭವನದಲ್ಲಿ ಆಯೋಜಿಸಿದ್ದ ಪಿ. ರಾಮಯ್ಯ ಅವರಿಗೆ ಶ್ರದ್ಧಾಂಜಲಿ. 'ನಾನು ಹಿಂದೂ ರಾಮಯ್ಯ' ಪುಸ್ತಕದ ಎರಡನೇ ಮುದ್ರಣದ ಜನಾರ್ಪಣೆ ಸಮಾರಂಭದಲ್ಲಿ ಅವರು ಮಾತನಾಡಿದರು.

'ಪಿ.ರಾಮಯ್ಯ ಅವರು ಪತ್ರಿಕಾ ವೃತ್ತಿಯನ್ನು ಸಮಾಜದ ಬದಲಾವಣೆಗೆ ಬಳಸುವ ಅಸ್ತ್ರ ಎಂದುಕೊಂಡು ಅದೇ ರೀತಿ ಬದುಕಿದರು. ಆದುಬುಂಚನಗರಿ ಮಠದ ಕಷ್ಟದ ಕಾಲದಲ್ಲೂ ಅವರು ಜತೆಗಿದ್ದರು. ಮಠದ ಬೆಳವಣಿಗೆಯಲ್ಲಿ ಅವರ ಪಾತ್ರವೂ ಇದೆ' ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ರಾಜೇಂದ್ರ ಪಿಸ್ಕೆಸ್ಟ ಮಾತನಾಡಿ, 'ಶಿಕ್ಷಣ ಕ್ಷೇತ್ರದಲ್ಲಿ ವಿಶೇಷ ಆಸಕ್ತಿ ಹೊಂದಿದ್ದ ರಾಮಯ್ಯ ಅವರು ಹಲವು ಶಿಕ್ಷಣ ಸಂಸ್ಥೆಗಳಿಗೆ ಒಡನಾಟ ಹೊಂದಿದ್ದರು. ಸರಳ ಭಾಷೆಯಿಂದಲೇ ಅವರು ಬರೆದ ವಿಶೇಷ ವರದಿ, ಲೇಖನಗಳು ಸಮಾಜದಲ್ಲಿ ಬದಲಾವಣೆಗೆ ದಾರಿ ಮಾಡಿಕೊಟ್ಟಿವೆ. ಬೆಂಗಳೂರಿಗೆ ಕಾವೇರಿ ನೀರು ಬರಲು ರಾಮಯ್ಯ ಅವರ ಪಾತ್ರವೂ ಇದೆ' ಎಂದರು.

ಕೃಷ್ಣ ಸಚಿವ ಎನ್.ಚಲುವರಾಯಸ್ವಾಮಿ ಮಾತನಾಡಿ, 'ರಾಜಕೀಯ ವಿಚಾರವಾಗಿ ಬರೆಯುತ್ತಲೇ ನನ್ನಂತಹ ಹಲವು ರಾಜಕಾರಣಿಗಳಿಗೆ ಅವರು ಮಾರ್ಗದರ್ಶನ ಮಾಡಿದ್ದಾರೆ. ಹಲವು ಪಾಠವನ್ನು ಅವರಿಂದ ಕಲಿತಿದ್ದೇನೆ ಎಂದು ನುಡಿದರು.

ಮುಖ್ಯಮಂತ್ರಿಯ ಮಾಧ್ಯಮ ಸಲಹಾಗರ ಕೆ.ವಿ.ಪ್ರಭಾಕರ್ 'ಮೇಲ್ಮನೆಯಲ್ಲಿ ನಡೆಯುತ್ತಿದ್ದ ಚರ್ಚೆಗಳಲ್ಲಿ ಗಂಭೀರತೆ ಮತ್ತು ಮೌಲ್ಯಗಳನ್ನು ತರುವಲ್ಲಿ ರಾಮಯ್ಯ ಶ್ರಮಿಸಿದರು. ತಾವು ತೊಡಗಿಸಿಕೊಂಡಿದ್ದ ಎಲ್ಲಾ ಕ್ಷೇತ್ರಗಳ ಘನತೆ ಹೆಚ್ಚಿಸಿ ಮಾದರಿಗಳನ್ನು ಸೃಷ್ಟಿಸಿದ್ದರು. ಪತ್ರಕರ್ತರಾದ ಅರಕೆರೆ ಜಯಣ್ಣ, ಅಶಾ ಕೃಷ್ಣಸ್ವಾಮಿ ಮಾತನಾಡಿದರು. ರಾಮಯ್ಯ ಅವರ ಪುತ್ರ ಡಾ.ಬಾಲಾಜಿ, ಎಚ್.ಡಿ.ದೇವೇಗೌಡ ಉಪಸ್ಥಿತರಿದ್ದರು.

ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಎಚ್.ಡಿ.ದೇವೇಗೌಡ, ಟಿ.ವೆಂಕಟೇಶ್, ಕಿವಾನಂದ ತಗಡೂರು, ಕೆ.ವಿ.ಪ್ರಭಾಕರ್ ಮತ್ತು ಕೆ.ವಿ.ಪ್ರಭಾಕರ್ ಅವರು ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು ಪ್ರಜಾವಾಣಿ ಚಿತ್ರ

# ಆಹಾರ ಉತ್ಸವಕ್ಕೆ ಚಾಲನೆ

ಬೆಂಗಳೂರು: ಪ್ಯಾರಡೈಸ್ ಪಾಕಶಾಲೆಯು ನಗರದ ಜನತೆಗೆ 'ಹೈದರಾಬಾದ್ ಹಲೀಮ್' ಉಚಿತಪಡಿಸಲು ಮುಂದಾಗಿದೆ. ಹಲೀಮ್ ಆಹಾರ ಉತ್ಸವ-2026 ಆರಂಭವಾಗಿದ್ದು ಪ್ಯಾರಡೈಸ್ ಮಳಿಗೆಗಳಲ್ಲಿ ಅಷ್ಟೇ ಅಲ್ಲದೆ, ಸ್ವಿಗ್ಗಿ ಮತ್ತು ಜೊಮ್ಯಾಟೊದಲ್ಲಿ ಆನ್‌ಲೈನ್ ಮೂಲಕ ಹಲೀಮ್ ತರಿಸಿಕೊಳ್ಳ ಬಹುದು.

ಪ್ಯಾರಡೈಸ್ ಪಾಕಶಾಲೆಯ ಕ್ರಾಸಿಕ್ ಮಟನ್ ಹಲೀಮ್, ಪ್ಯಾರಡೈಸ್ ವಿಶೇಷಾಗಿ ತಯಾರಿಸಿದ ಚಿಕನ್ ಹಲೀಮ್ ಅನ್ನು ಪರಿಚಯಿಸಿದೆ ಎಂದು ಪ್ಯಾರಡೈಸ್ ಫುಡ್ ಕೋರ್ಟ್‌ನ ವೆಜ್ ಲಿಮಿಟೆಡ್‌ನ ಸಿಇಒ ಅಭಿಷೆಕ್ ವಿಷ್ಣಾತಿಳಿದ್ದಾರೆ.

'ಹಲೀಮ್ ಖಾದ್ಯದನ್ನು ಉತ್ತಮ ಗುಣಮಟ್ಟದಪದಾರ್ಥಗಳಿಂದ ತಯಾರಿಸಲಾಗುತ್ತದೆ. ಎಲ್ಲಾ ಕಡೆ ಒಂದೇ ರೀತಿಯ ವಿಶಿಷ್ಟವಾದ ರುಚಿಯನ್ನು ಕಾಪಾಡಿಕೊಳ್ಳಲಾಗಿದೆ. ಗ್ರಾಹಕರ ವಿಶ್ವಾಸವೇ ನಮಗೆ ಮುಖ್ಯ' ಎಂದು ಪ್ಯಾರಡೈಸ್ ಪಾಕಶಾಲೆಯ ಉಪಾಧ್ಯಕ್ಷ ಸ್ವತಂತ್ರ ಗೌಡ ಹೇಳಿದ್ದಾರೆ.

ಪ್ಯಾರಡೈಸ್ ಪ್ರಸ್ತುತ ನಗರದಲ್ಲಿ 11 ಮಳಿಗೆಗಳನ್ನು ಹೊಂದಿದ್ದು, ಈ ವರ್ಷದ ಅಂತ್ಯದ ವೇಳೆಗೆ 22ಕ್ಕೆ ಏರಿಸುವುದು ಉದ್ದೇಶವಿದೆ ಎಂದು ತಿಳಿಸಿದ್ದಾರೆ.

# ಕಾಂಗ್ರೆಸ್ ಭವನಕ್ಕೆ ಸರ್ಕಾರಿ ಜಾಗ: ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ಭವನಗಳ ನಿರ್ಮಾಣಕ್ಕೆ ನಿಯಮ ಬಾಹಿರವಾಗಿ ಸರ್ಕಾರಿ ನಿವೇಶನ ಕುಬಿಸಲಾಗಿತ್ತಿದೆ ಎಂದು ವಿಧಾನ ಪರಿಷತ್‌ನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ರಾಜ್ಯ ಸರ್ಕಾರ ಬಡವರಿಗೆ ಮನೆ ನೀಡಿಲ್. ಭೂ ರಹಿತರಿಗೆ ಭೂಮಿ ನೀಡಿಲ್. ಆದರೆ, ತಾನೇ ಭೂಮಿ ಕುಬಿಸುವ ಕೆಲಸ ಮಾಡುತ್ತಿದೆ. ಮಧೋಳ, ಬಾದಾಮಿ, ಚಿಕ್ಕಬಳ್ಳಾಪುರ, ತುಮಕೂರು, ಜಾಮರಾಜನಗರ, ದಕ್ಷಿಣ ಕನ್ನಡ, ಉಡುಪಿ ಸೇರಿದಂತೆ ಹಲವೆಡೆ ನಿವೇಶನಗಳನ್ನು ನಿಯಮ ಉಲ್ಲಂಘಿಸಿ ಆತ್ಮಕ ಕಡಿಮೆ ಬೆಲೆಗೆ ಪಡೆದುಕೊಂಡಿದ್ದಾರೆ. ಹುಬ್ಬಳ್ಳಿ- ಧಾರವಾಡದಲ್ಲಿ ನಿವೇಶನಕ್ಕೆ ದರವನ್ನೇ ನಮೂದಿಸಿಲ್ ಎಂದುದೂರಿದರು.

> **ಕಾಂಗ್ರೆಸ್ ಭವನಗಳಿಗೆ ಸರ್ಕಾರಿ ಜಾಗ ಬಳಸಿಕೊಳ್ಳುತ್ತಿದ್ದೇವೆ. ವಿಜಯಿಯಾದ ಪಾಲಾದೂ ಆರೋಪ ಮಾಡಿಕೊಳ್ಳಲಿ. ಈ ಬಗ್ಗೆ ಯಾರಾದರೂ ನ್ಯಾಯಾಲಯದ ಮೆಟ್ಟಿಲೇರುವುದಾದರೆ ಏರಲಿ**
>
> **ಡಿ.ಕೆ. ಶಿವಕುಮಾರ್,** ಕೆಪಿಸಿಸಿ ಅಧ್ಯಕ್ಷ

ಸಚಿವರಾದ ಕೆ.ಎಚ್ಮುನಿಯಪ್ಪ, ಆರ್‌ಬಿ.ತಿಮ್ಮಾಪುರ ನೇತೃತ್ವದ ನಿಯೋಗ ಒಳ ಮೀಸಲಾತಿ ಮಸೂದೆಗೆ ಅನುಮೋದನೆ ನೀಡುವಂತೆ ಕೋರಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಮನವಿ ಸಲ್ಲಿಸಿತು

# ಒಳಮೀಸಲಾತಿ ಮಸೂದೆ: ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಹಾರ ಸಚಿವ ಕೆ.ಎಚ್. ಮುನಿಯಪ್ಪ, ಸಚಿವ ಆರ್. ಬಿ.ತಿಮ್ಮಾಪುರ ನೇತೃತ್ವದ ನಿಯೋಗ ಒಳ ಮೀಸಲಾತಿ ಮಸೂದೆಗೆ ಅನುಮೋದನೆ ನೀಡುವಂತೆ ಕೋರಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಮನವಿ ಸಲ್ಲಿಸಿತು.

ಪರಿಶಿಷ್ಟ ಜಾತಿ ಎಡಗೈ ಸಮುದಾಯದ ಶಾಸಕರು, ವಿಧಾನಪರಿಷತ್ ಸದಸ್ಯರು ಹಾಗೂ ಸಮುದಾಯ ಮುಖಂಡರನ್ನು ಒಳಗೊಂಡ ನಿಯೋಗ ಲೋಕಭವನ ದಲ್ಲಿ ರಾಜ್ಯಪಾಲರನ್ನು ಭೇಟಿ ಮಾಡಿ, 'ಸಂವಿಧಾನದ ಸಾಮಾಜಿಕ ನ್ಯಾಯ ಮತ್ತು ಸಮಾನತೆಯ ಮೌಲ್ಯಗಳಿಗೆ ಅಗುಗುಣವಾಗಿ ಪರಿಶಿಷ್ಟ ಪಂಕಿಯ 101 ಒಳ ಸಮುದಾಯಗಳಿಗೆ ನ್ಯಾಯಸಮ್ಮತ ಮೀಸಲಾತಿ ಕಲ್ಪಿಸಲು ಮಸೂದೆ ವಿಧಾನ ಪರಿಷತ್ತಿನಲ್ಲಿ ಅಂಗೀಕರಿಸಲ್ಪಟ್ಟ ಒಳಮೀಸಲಾತಿ ಮಸೂದೆಗೆ ಅನುಮೋದನೆ ನೀಡಬೇಕು ಎಂದು ಮನವಿ ಮಾಡಿದರು.

ವಿಧಾನಸಭೆ ಮತ್ತು ವಿಧಾನ ಪರಿಷತ್ತಿನಲ್ಲಿ ಆಡಳಿತ ಹಾಗೂ ಕೋರಿದರು.

ಸಚಿವರಾದ ಎಚ್.ಸಿ.ಮಹಾದೇವಪ್ಪ, ಶರಣಪ್ರಕಾಶ್ ಪಾಟೀಲ, ಶಾಸಕರಾದ ಆರ್.ವಿ.ದೇಶಪಾಂಡೆ, ಎಸ್.ಎನ್.ಸುಭಾಷ್ ಗುತ್ತೇದಾರ್, ಎಂ.ಆರ್.ಪಾಟೀಲ್, ಎಸ್.ವಿ.ಸಂಕನೂರ, ಎಂ.ಎಸ್.ಅರುಣ್, ಎಂ.ಎಸ್.ಅಯ್ಯರ್, ಎಂ.ಎಸ್.ಎಂ ಪಟ್ಟಣಶೆಟ್ಟಿ, ಎಸ್.ಎಂ.ಕೃಷ್ಣ